**<u>ವಾಹಕ</u>**

## ಅಟಲ್ ಪಿಂಚಣಿ ಯೋಜನೆ(ಎಪಿವೈ)

| | |
|---|---|
| ಎಪಿವೈಯ ವ್ಯಾಪ್ತಿ: | ಎಲ್ಲ ಭಾರತೀಯ ಪ್ರಜೆಗಳು, ಅದರಲ್ಲೂ ವಿಶೇಷವಾಗಿ ಅಧಿಕೃತ ಪಿಂಚಣಿ ಸೌಲಭ್ಯವನ್ನು ಹೊಂದಿಲ್ಲದ ಅಸಂಘಟಿತ ಕ್ಷೇತ್ರದವರನ್ನು ಎಪಿವೈಯು ಗುರಿಯಲ್ಲಿಟ್ಟುಕೊಂಡಿದೆ. ತಮ್ಮ ನಿವೃತ್ತಿಗಾಗಿ ಇಚ್ಛಾಪೂರ್ವಕವಾಗಿ ಉಳಿತಾಯ ಮಾಡಲು ಈ ಯೋಜನೆಯು ಅವರಿಗೆ ಪ್ರೋತ್ಸಾಹ ನೀಡುತ್ತದೆ. |
| ಯೋಜನೆಯ ನಿರ್ವಹಣೆ | ಇದೊಂದು ಸರಕಾರಿ ಯೋಜನೆಯಾಗಿದ್ದು ಇದನ್ನು ಎನ್ ಪಿ ಎಸ್ ವ್ಯವಸ್ಥೆಯ ಮೂಲಕ ಪಿಎಫ್ ಆರ್ ಡಿ ಎ ಸಂಸ್ಥೆಯು ನಿರ್ವಹಿಸುತ್ತದೆ. |
| ಪ್ರವೇಶದ ವಯಸ್ಸು | 18 ರಿಂದ 40 ವರ್ಷ |
| ಅರ್ಹತೆ | ಅಸಂಘಟಿತ ಕ್ಷೇತ್ರದ ಯಾವುದೇ ಭಾರತೀಯ ಪ್ರಜೆ |
| ಶಾಸನ ಬದ್ಧ ಸಾಮಾಜಿಕ ಭದ್ರತಾ ಯೋಜನೆಗಳ ಸವಿವರ ಪಟ್ಟಿ | i. ಎಂಪ್ಲೋಯೀಸ್ ಪ್ರಾವಿಡೆಂಟ್ ಫಂಡ್ ಆ್ಯಂಡ್ ಮಿಸಲೇನಿಯಸ್ ಪ್ರಾವಿಷನ್ ಆ್ಯಕ್ಟ್, 1952<br>ii. ದ ಕೋಲ್ ಮೈನ್ಸ್ ಪ್ರಾವಿಡೆಂಟ್ ಫಂಡ್ ಆ್ಯಂಡ್ ಮಿಸಲೇನಿಯಸ್ ಪ್ರಾವಿಷನ್ ಆ್ಯಕ್ಟ್, 1948<br>iii. ಅಸ್ಸಾಂ ಟೀ ಪ್ಲಾಂಟೇಷನ್ ಪ್ರಾವಿಡೆಂಟ್ ಫಂಡ್ ಆ್ಯಂಡ್ ಮಿಸಲೇನಿಯಸ್ ಪ್ರಾವಿಷನ್ ಆ್ಯಕ್ಟ್, 1955<br>iv. ಸೀಮೆನ್ಸ್ ಪ್ರಾವಿಡೆಂಟ್ ಫಂಡ್ ಆ್ಯಕ್ಟ್, 1966<br>v. ಜಮ್ಮು –ಕಾಶ್ಮೀರ್ ಎಂಪ್ಲೋಯೀಸ್ ಪ್ರಾವಿಡೆಂಟ್ ಫಂಡ್ ಆ್ಯಂಡ್ ಮಿಸಲೇನಿಯಸ್ ಪ್ರಾವಿಷನ್ ಆ್ಯಕ್ಟ್, 1955 |
| ಎಪಿವೈ ಖಾತೆಯನ್ನು ತೆರೆಯುವುದು | ಉಳಿತಾಯ ಖಾತೆಯಿರುವ ಬ್ಯಾಂಕುಗಳ ಮುಖಾಂತರ ಈ ಯೋಜನೆಯ ಖಾತೆಗಳನ್ನು ತೆರೆಯಬಹುದು. |

| | |
|---|---|
| ದೇಣಿಗೆ ಮೊತ್ತ | • 18 ರ ವಯಸ್ಸಿಗೆ ಸೇರುವ ಚಂದಾದಾರರು ಒಂದು ಸಾವಿರ ರೂಪಾಯಿ ಮತ್ತು ಐದು ಸಾವಿರ ರೂಪಾಯಿಗಳ ನಿಶ್ಚಿತ ಮಾಸಿಕ ಪಿಂಚಣಿ ಪಡೆಯಲು ಅನುಕ್ರಮವಾಗಿ ಮಾಸಿಕ 42 ರೂಪಾಯಿ ಮತ್ತು 210 ರೂಪಾಯಿಗಳನ್ನು ದೇಣಿಗೆ ನೀಡಬೇಕು.<br>• ಚಂದಾದಾರರ ಬ್ಯಾಂಕ್ ಉಳಿತಾಯ ಖಾತೆಯಿಂದ ಸ್ವಯಂ ವರ್ಗಾವಣೆ ಸೌಲಭ್ಯದ ಮೂಲಕ ಮಾಸಿಕ ದೇಣಿಗೆಗಳನ್ನು ಪಾವತಿಸಲಾಗುವುದು. |
| ಭಾರತ ಸರಕಾರದ ಸಹ ದೇಣಿಗೆಯನ್ನು ಪಡೆಯಲು ಅರ್ಹತೆಗಳು | ಚಂದಾದಾರರ ದೇಣಿಗೆಯ ಶೇಕಡಾ ೫೦ ರಷ್ಟು ಮೊತ್ತವನ್ನು ಅಥವಾ ಯಾವುದು ಕಡಿಮೆಯೋ ಅದನ್ನು ಭಾರತ ಸರಕಾರವು ಸಹದೇಣಿಗೆಯಾಗಿ ನೀಡುವುದು. ಭಾರತ ಸರಕಾರದ ಸಹ ದೇಣಿಗೆಯು ಯಾವುದೇ ಶಾಸನಬದ್ಧ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ತೊಡಗಿಕೊಳ್ಳದವರಿಗೆ ಹಾಗೂ ಆದಾಯ ತೆರಿಗೆ ಪಾವತಿದಾರರಲ್ಲದವರಿಗೆ ಮಾತ್ರ ಲಭ್ಯವಿರುತ್ತದೆ. |
| ಎಪಿವೈಯ ಪ್ರಯೋಜನಗಳು | 60 ರ ವಯಸ್ಸಿನ ಅನಂತರ ಚಂದಾದಾರನಿಗೆ ಮತ್ತು ಸದ್ರಿ ವ್ಯಕ್ತಿಯ ಬಾಳಸಂಗಾತಿಗೆ/ ನಾಮನಿರ್ದೇಶಿತರಿಗೆ ಖಾತರಿ ಕನಿಷ್ಠ ಪಿಂಚಣಿ ಮೊತ್ತವಾಗಿ 1000 ರೂಪಾಯಿಗಳಿಂದ 5000 ರೂಪಾಯಿಗಳವರೆಗೆ ಮಾಸಿಕ ಪಿಂಚಣಿ. |
| ಎಪಿವೈಯ ಇತರ ವೈಶಿಷ್ಟ್ಯಗಳು | • ಪ್ರಸಕ್ತ ಅಸ್ತಿತ್ವದಲ್ಲಿರುವ 18 ರಿಂದ 40 ವರ್ಷದೊಳಗಿನ ಸ್ವಾವಲಂಬನ್ ಯೋಜನೆಯ ಚಂದಾದಾರರು ಬೇಡವೆನ್ನದಿದ್ದರೆ ಸ್ವಯಂ ಚಾಲಿತವಾಗಿ ಎಪಿವೈ ಯೋಜನೆಗೆ ವರ್ಗಾಂತರಗೊಳ್ಳುತ್ತಾರೆ.<br>• ಐದು ವರ್ಷಗಳಿಗೆ ಸರಕಾರದ ಸಹದೇಣಿಗೆ ದೊರೆಯುತ್ತದೆ. ಅರ್ಥಾತ್, 2015 ರ ದಶಂಬರ 31 ರೊಳಗೆ ಈ ಯೋಜನೆಗೆ ಸೇರಿದ ಚಂದಾದಾರರಿಗೆ 2015-16 ರಿಂದ 2019-20 ರವರೆಗೆ ಅದು ಲಭ್ಯವಿರುತ್ತದೆ.<br>• ಪ್ರಸಕ್ತ ಅಸ್ತಿತ್ವದಲ್ಲಿರುವ ಸ್ವಾವಲಂಬನ್ ಚಂದಾದಾರ |

| | |
|---|---|
| | ಅರ್ಹನಾಗಿದ್ದರೆ ನಿರ್ಗಮಿಸುವ ಅವಕಾಶದೊಂದಿಗೆ ಎಪಿವೈಗೆ ಸ್ವಯಂ ಚಾಲಿತವಾಗಿ ವರ್ಗಾಂತರಗೊಳ್ಳಬಹುದು. ಅದೇನಿದ್ದರೂ ಎಪಿವೈಯಲ್ಲಿರುವ 5 ವರ್ಷಗಳ ಸರಕಾರಿ ಜಂಟಿ ದೇಣಿಗೆಯು ಸ್ವಾವಲಂಬನ್ ಚಂದಾದಾರರು ಈಗಾಗಲೇ ಪ್ರಾಪ್ತಿ ಮಾಡಿಕೊಂಡಿರುವ ಅವಧಿಗೆ ಮಾತ್ರ ಲಭ್ಯವಾಗುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸ್ವಾವಲಂಬನ್ ಫಲಾನುಭವಿಯೊಬ್ಬ ಒಂದು ವರ್ಷದ ಸರಕಾರಿ ಸಹ ದೇಣಿಗೆಯನ್ನು ಪಡೆದುಕೊಂಡಿದ್ದರೆ, ಎಪಿವೈಯಡಿಯಲ್ಲಿ ಅವನಿಗೆ ಮುಂದಿನ ನಾಲ್ಕು ವರ್ಷಗಳಿಗೆ ಮಾತ್ರ ಸರಕಾರದ ಸಹದೇಣಿಗೆಯ ಪ್ರಯೋಜನ ದೊರೆಯುತ್ತದೆ. ಪ್ರಸಕ್ತ ಸ್ವಾವಲಂಬನ್ ಫಲಾನುಭವಿಗಳಾಗಿದ್ದು ಸೂಚಿತ ಎಪಿವೈಯಿಂದ ಅವರು ಹೊರಬರಲು ಬಯಸಿದರೆ ಅವರಿಗೆ ಅರ್ಹರಾಗಿದ್ದರೆ ಮಾತ್ರ 2016-17 ರವರೆಗೆ ಸರಕಾರದ ಸಹದೇಣಿಗೆಯನ್ನು ನೀಡಲಾಗುವುದು. ಹಾಗೇನೇ ಆ ಯೋಜನೆಯಡಿಯಲ್ಲಿ ನಿರ್ಗಮನದ ವಯಸ್ಸಿಗೆ ಬರುವವರೆಗೆ ಅವರಿಗೆ ಎನ್ ಪಿ ಎಸ್ ಸ್ವಾವಲಂಬನ್ ಸೌಲಭ್ಯ ಮುಂದುವರೆಯುವುದು.<br>• ಎಪಿವೈಯಡಿಯಲ್ಲಿ ನಿಧಿಗಳ ನಿರ್ವಹಣೆಯು ಸರಕಾರ ನಿಗದಿಪಡಿಸಿದ ಹೂಡಿಕೆ ಸ್ವರೂಪಕ್ಕನುಗುಣವಾಗಿರುತ್ತದೆ.<br>• ಹೂಡಿಕೆ ಅಥವಾ ತಾವು ಬಯಸಿದ ಪಿಂಚಣಿ ನಿಧಿ ಆಯ್ಕೆಯ ಯಾವುದೇ ಅವಕಾಶ ವೈಯುಕ್ತಿಕ ಚಂದಾದಾರರಾಗಿರುವುದಿಲ್ಲ. |
| ದಾಖಲೀಕರಣದ ಕಾಗದ ಪತ್ರಗಳು | ಈ ಕೆಳಗಿನವುಗಳನ್ನು ಒಳಗೊಂಡಿರುವ ಪ್ರಪತ್ರ:<br>• ಎಪಿವೈ ಅರ್ಜಿ ನಮೂನೆ<br>• ಸ್ವಯಂ ಘೋಷಣೆ<br>• ಸ್ವಯಂ ವರ್ಗಾವಣೆಗೆ ಅಧಿಕಾರ ಪತ್ರ |

| ಪ್ರವೇಶ ವಯಸ್ಸು | ಸೂಚಿತ ಎಪಿವೈ ದೇಣಿಗೆ ನಕ್ಷೆ | ಚೇಣಿಗೆ 1000 ವರ್ಷಗಳು | ಚೇಣಿಗೆ 2000 ವರ್ಷಗಳು | ಮಾಸಿಕ 3000 ಪಿಂಚಣಿಗೆ | ಮಾಸಿಕ 4000 ಪಿಂಚಣಿಗೆ | ಮಾಸಿಕ 5000 ಪಿಂಚಣಿಗೆ |
|---|---|---|---|---|---|---|
| 18 | 42 | 42 | 84 | 126 | 168 | 210 |
| 19 | 41 | 46 | 92 | 138 | 183 | 228 |
| 20 | 40 | 50 | 100 | 150 | 198 | 248 |
| 21 | 39 | 54 | 108 | 162 | 215 | 269 |
| 22 | 38 | 59 | 117 | 177 | 234 | 292 |
| 23 | 37 | 64 | 127 | 192 | 254 | 318 |
| 24 | 36 | 70 | 139 | 208 | 277 | 346 |
| 25 | 35 | 76 | 151 | 226 | 301 | 376 |
| 26 | 34 | 82 | 164 | 246 | 327 | 409 |
| 27 | 33 | 90 | 178 | 268 | 356 | 446 |
| 28 | 32 | 97 | 194 | 292 | 388 | 485 |
| 29 | 31 | 106 | 212 | 318 | 423 | 529 |
| 30 | 30 | 116 | 231 | 347 | 462 | 577 |
| 31 | 29 | 126 | 252 | 379 | 504 | 630 |
| 32 | 28 | 138 | 276 | 414 | 551 | 689 |
| 33 | 27 | 151 | 302 | 453 | 602 | 752 |
| 34 | 26 | 165 | 330 | 495 | 659 | 824 |
| 35 | 25 | 181 | 362 | 543 | 722 | 902 |

| | | | | | | |
|---|---|---|---|---|---|---|
| 36 | 24 | 198 | 396 | 594 | 792 | 990 |
| 37 | 23 | 218 | 436 | 654 | 870 | 1,087 |
| 38 | 22 | 240 | 480 | 720 | 957 | 1,196 |
| 39 | 21 | 264 | 528 | 792 | 1,054 | 1,318 |
| 40 | 20 | 291 | 582 | 873 | 1,164 | 1,454 |

- ಈ ಯೋಜನೆ ಸರಕಾರದ ಅನುಮೋದನೆಗೆ ಒಳಪಟ್ಟಿದೆ